ವಿಜಯ ಕರ್ನಾಟಕ VK
ಸೋಮವಾರ,8 ಫೆಬ್ರವರಿ 2016

## ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ

# ಭರತನಾಟ್ಯ, ಸಂಗೀತಕ್ಕೆ ತಲೆದೂಗಿದ ಜನ

**ವಿಕ ಸುದ್ದಿಲೋಕ**, ಹೊನ್ನಾವರ

ತಾಲೂಕಿನ ಕೆರೆಮನೆಯಲ್ಲಿ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವದ 2ನೇ ದಿನ ಶನಿವಾರ ರಾತ್ರಿ ಸಿಂಗಾಪುರ ಗಾಯತ್ರಿ ಶ್ರೀರಾಮ ಪ್ರದರ್ಶಿಸಿದ ಭರತನಾಟ್ಯ ಹಾಗೂ ಪಂ. ಗಣಪತಿ ಭಟ್ ಹಾಸಣಗಿ ಅವರ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾಸಕ್ತ ಪ್ರೇಕ್ಷಕರಿಗೆ ರಸದೌತಣ ನೀಡಿದವು.

ಗಾಯತ್ರಿ ಶ್ರೀರಾಮ ಅವರು ಒಂದುವರೆ ತಾಸು ಭರತ ನಾಟ್ಯ ಪ್ರದರ್ಶನ ನೀಡಿದರು. ಖಂಡಗತಿ ರಾಗದಲ್ಲಿ ಜಿ. ಗುರುಮೂರ್ತಿ ರಚಿತ ಶಿವನು ಜಗತ್ತನ್ನು ಹೇಗೆ ಹುಟ್ಟು ಹಾಕಿದ ಎಂಬ ವಿವರಣೆ ನೀಡುವ ಶಿವನ ತಾಂಡವ, ರಾಗ ಮಾಲಿಕೆ ರಾಗದಲ್ಲಿ ಬಾಲಸುಬ್ರಹ್ಮಣ್ಯಂ ರಚಿತ ಕೃಷ್ಣನ ಶೃಂಗಾರ ಕುರಿತ ಭಕ್ತಿರಸ ಪ್ರಧಾನವಾದ ಶೃಂಗಾರಲೋಲ ಮುರಳಿಧರ, ಶುದ್ಧರಾಗದಲ್ಲಿ ರಾಧೆಯ ಮತ್ತು ಕೃಷ್ಣನ ಪ್ರಥಮ ಮಿಲನ ಸಂದರ್ಭ ಪ್ರತಿಬಿಂಬಿಸುವ ಕೇಳಿ ಮದಗಜ ರಾಧೆಯ ಪ್ರಸ್ತುತಿಯ ಭರತನಾಟ್ಯಗಳು ಮನೋಜ್ಞವಾಗಿ ಮೂಡಿಬಂದವು.

ನಂತರ ಪಂ.ಗಣಪತಿ ಭಟ್ ಹಾಸಣಗಿ ಅವರ ಹಿಂದೂ ಸ್ತಾನಿ ಶಾಸ್ತ್ರೀಯ ಸಂಗೀತ ನಡೆಯಿತು. ಜೋಗ ರಾಗದಲ್ಲಿ ಶಾಸ್ತ್ರೀಯ ಸಂಗೀತ, ಮಧುಕಂಸರಾಗ, ನಂತರ ಕಂಗಳಿ ವ್ಯಾತಕೋ ಕಾವೇರಿ ರಂಗನ ನೋಡದಾ

ವಿಕ ಚಿತ್ರಲೋಕ



**ಪಂ.ಗಣಪತಿ ಭಟ್ ಹಾಸಣಗಿ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಿತು.**

ಹಾಡುಗಳು ಸಂಗೀತ ಶೋತೃಗಳ ಮನಗೆದ್ದವು. ಗೋಪಾಲ ಕೃಷ್ಣ ಹೆಗಡೆ ಕಲ್ಭಾಗ ತಬಲಾ, ಗೌರೀಶ ಯಾಜಿ ಕೂಜಳ್ಳಿ ಸಂವಾದಿನಿ ಸಾಥ್ ನೀಡಿದರು.

**ಫೆ. 8 ರಂದು ಸಮಾರೋಪ**

ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು ಯಕ್ಷಗಾನ ಕಲಾವಿದ ಪಾತಾಳ ವೆಂಕಟ್ರಮಣ ಭಟ್ ಇವರಿಗೆ ಕೆರೆಮನೆ ಗಜಾನನ ಹೆಗಡೆ ಪ್ರಶಸ್ತಿ ಪ್ರಧಾನ, ಮಾರುತಿಪುರದ ಗುಂಡು ನರಸಿಂಹಯ್ಯ, ಯಲ್ಲಾಪುರದ ಶಂಕರ ಭಾಗವತ, ಅಪ್ಸರಕೊಂಡದ ಕೆ.ಜಿ. ಭಟ್ಟ, ಕತಗಾಲದ ಅಶೋಕ ಭಟ್ಟ ಇವರಿಗೆ ಸನ್ಮಾನ ನಡೆಯಲಿದೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸುವುರು. ಮುಖ್ಯ ಅತಿಥಿಗಳಾಗಿ ಸಂಸದೆ ಶೋಭಾ ಕರಂದ್ಲಾಜೆ, ಕಾರವಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ. ಡಿ. ಹಿರೇಗೌಡರ, ಶ್ರೀಕ್ಷೇತ್ರ ಕಟೀಲಿನ ಪ್ರಧಾನ ಅರ್ಚಕ ಹರಿನಾರಾಯಣ ದಾಸ ಅಸ್ರಣ್ಣ, ಸಾಹಿತಿ ಗೋಪಾಲಕೃಷ್ಣಪೈ, ಸಾಲಿಗ್ರಾಮ ಮೇಳದ ಯಜಮಾನ ಪಿ. ಕಿಶನ್ ಹೆಗ್ಡೆ, ಅಂಕಣಕಾರ ಪ್ರೊ. ಬಿ.ಹರಿಶ್ಚಂದ್ರ ಭಟ್, ವಿಎಸೆಸ್ ಸಂಘದ ಅಧ್ಯಕ್ಷ ಗಣಪಯ್ಯ ಗೌಡ ಪಾಲ್ಗೊಳ್ಳುವರು. ರಾಜ್ಯಸಭಾ ಸದಸ್ಯ ಆಯನೂರು ಮಂಜುನಾಥ ಸಮಾರೋಪ ಭಾಷಣ ಮಾಡುವರು.

ಸಂಜೆ 6 ಕ್ಕೆ ಬೆಂಗಳೂರಿನ ಮಧುಲಿತಾ ಮಹೋಪಾತ್ರ ಅವರಿಂದ ಒಡಿಸ್ಸಿ ನೃತ್ಯ, ಸಮನ್ವಯ ಡಾನ್ಸ್ ಕಂಪನಿ ತಂಡದಿಂದ ಗಂಗೆ-ಗೌರಿ ವಿಲಾಸಂ ಕೂಚಿಪುಡಿ ಯಕ್ಷ



**ಸಿಂಗಾಪುರ ಗಾಯತ್ರಿ ಶ್ರೀರಾಮ ಪ್ರದರ್ಶಿಸಿದ ಭರತನಾಟ್ಯ.**

ಗಾನ, ಒರಿಸ್ಸಾದ ಗಂಜಾಂ ಜಾನಪದ ನೃತ್ಯ ರಣಪ ನೃತ್ಯ, ಛಡಿಯಾ ನೃತ್ಯ ಮತ್ತು ಶಂಖ ವಾದನ ನಡೆಯಲಿದೆ.